

# ಒನ್ ಕಟ್ ಕನ್ನಡ ಕಟ್!

ಕನ್ನಡ ಸಿನಿಮಾಗಳ ಹೆಸರುಗಳಲ್ಲಿ, ಸಿನಿಮಾ ಪೋಸ್ಟರುಗಳಲ್ಲಿ, ಕನ್ನಡ ಚಿತ್ರಕರ್ಮಿಗಳ ಮಾತು, ಸೋಷಿಯಲ್ ಮೀಡಿಯಾ ಪೋಸ್ಟ್‌ಗಳಲ್ಲಿ ಕನ್ನಡ ಬಹುತೇಕ ಮರೆಯಾಗಿ ಬಹುಕಾಲ ಸಂದುಹೋಗಿವೆ. ಆದರೆ ಕನ್ನಡದದ್ದೆಂದು ಹೇಳಿಕೊಳ್ಳುವ ಸಿನಿಮಾಗಳ ಒಳಗೂ ಕನ್ನಡ ಮರೆಯಾಗುತ್ತಿರುವುದು ಹೊಸ ಬೆಳವಣಿಗೆ. ಈ ಬೆಳವಣಿಗೆಯ ಸ್ಪಷ್ಟ ರೂಹು ಕಾಣಿಸುವುದು ಇತ್ತೀಚೆಗೆ ಒಟಿಟಿ ವೇದಿಕೆಯಲ್ಲಿ ಬಿಡುಗಡೆಯಾದ ಡ್ಯಾನಿಶ್ ಸೇಠ್ ಅವರ 'ಒನ್ ಕಟ್ ಟು ಕಟ್' ಸಿನಿಮಾದಲ್ಲಿ.

ಬೇರೆ ಭಾಷೆಯ ಸಿನಿಮಾಗಳಲ್ಲಿ ಕರ್ನಾಟಕದೊಳಗಿನ ಪ್ರದೇಶದ ವಿವರ ಬಂದರೆ ಅಲ್ಲಿನ ಸಂಭಾಷಣೆಯಲ್ಲಿ ಒಂದೇ ಒಂದು ಸಾಲು ಕನ್ನಡವನ್ನು ಇಡುತ್ತಾರಲ್ಲಾ; ಅದನ್ನು ಕೇಳಿದಾಗ ಕನ್ನಡದ ಪ್ರೇಕ್ಷಕರಿಗೆ ಒಮ್ಮೆಂದೊಮ್ಮೆಲೇ ಊರ ಬಾವಿಯ ನೀರು ಕುಡಿದಷ್ಟೇ ರೋಮಾಂಚನವಾಗುತ್ತದಲ್ಲಾ; 'ಒನ್ ಕಟ್ ಟು ಕಟ್' ಸಿನಿಮಾದಲ್ಲಿ ಕನ್ನಡದ ಮಾತು ಕೇಳಿದಾಗಲೂ ಅಂಥದ್ದೇ ಅನುಭವ ಆಗುತ್ತದೆ. ಯಾಕೆಂದರೆ ಆ ಸಿನಿಮಾದಲ್ಲಿ ಕನ್ನಡದ ಮಾತು ಕೇಳುವುದೂ ಅಷ್ಟೇ ಅಪರೂಪಕ್ಕೆ.

ಇನ್ನೂ ಸ್ವಾರಸ್ಯದ ವಿಷಯವೆಂದರೆ, ಪಾತ್ರಗಳು ಚಿತ್ರದುದ್ದಕ್ಕೂ ಆಡುವ ಇಂಗ್ಲಿಷ್, ಹಿಂದಿ ಮಾತುಗಳಿಗೆ ಪಟಪಟನೇ ಪರದೆಯ ಕೆಳಗೆ ಸಬ್‌ಟೈಟಲ್‌ಗಳು ಬರುತ್ತವೆ. ಅಂದರೆ ಪಾತ್ರಗಳು ಇಂಗ್ಲಿಷಿನಲ್ಲಿ ಆಡುವ ಮಾತಿಗೆ ಇಂಗ್ಲಿಷಿನಲ್ಲಿಯೇ ಸಬ್‌ಟೈಟಲ್!

ಹಾಗಾದರೆ ಈ ಸಿನಿಮಾ ಯಾವ ಪ್ರೇಕ್ಷಕರನ್ನು ಉದ್ದೇಶವಾಗಿಟ್ಟುಕೊಂಡು ಮಾಡಿದ ಸಿನಿಮಾ? ಕನ್ನಡದ ಸಿನಿಮಾ ಎಂದು ಹೇಳಿಕೊಂಡ ಮೇಲೆ ಕನ್ನಡದ ಪ್ರೇಕ್ಷಕಗಣವೇ ನಿರ್ದೇಶಕರ ಮನಸ್ಸಿನಲ್ಲಿರುತ್ತದಲ್ಲವೇ? ಕನ್ನಡದ ಪ್ರೇಕ್ಷಕರಿಗೆ ಇಂಗ್ಲಿಷ್ ಸಂಭಾಷಣೆಗೆ ಇಂಗ್ಲಿಷ್ ಸಬ್ ಟೈಟಲ್ ಕೊಡುವುದರ ಹಿಂದೆ ಇರುವ ಗಹನ ಉದ್ದೇಶವೇನೋ ಖಂಡಿತ ಬಗೆಹರಿಯುವುದಿಲ್ಲ.

ಸೋಷಿಯಲ್ ಮೀಡಿಯಾ ಆ್ಯಕ್ಟಿವಿಸ್ಟ್, ಸರ್ಕಾರ, ವ್ಯವಸ್ಥೆಗಳನ್ನು ತಮಾಷೆ ಮಾಡುವುದು ಈ ಸಿನಿಮಾ ಕಥೆಯ(?) ಉದ್ದೇಶವಾಗಿದೆ ಎಂದು ಮೇಲ್ನೋಟಕ್ಕೆ ಅಂದುಕೊಳ್ಳಬಹುದು. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಈ ಸಿನಿಮಾ ಮೂಲಕ ನಿರ್ದೇಶಕರು ನಿಜವಾಗಲೂ ತಮಾಷೆಯ ವಸ್ತುವನ್ನಾಗಿಸಿರುವುದು ಕನ್ನಡ ಭಾಷೆಯನ್ನು. ಇದು ಇಂದಿನ ಕಾಲದ ಬೆಂಗಳೂರನ್ನು ಪ್ರತಿನಿಧಿಸುತ್ತದೆ, ಹೊಸ ಕಾಲದ ಜನರ ಈಡಿಯಂ ಅನ್ನು ಹಿಡಿಯುವ ಪ್ರಯತ್ನ ಎಂದೆಲ್ಲ ಏನೇ ಸಮರ್ಥನೆಗಳನ್ನು ಕೊಟ್ಟುಕೊಳ್ಳಬಹುದು, ಆದರೆ ಆ ಪ್ರಯತ್ನಕ್ಕೆ ಖಂಡಿತ ಇದಕ್ಕಿಂತ ಬೇರೆ ದಾರಿಗಳಿದ್ದವು. ಕನ್ನಡದ ಸಿನಿಮಾದಲ್ಲಿ ಬೇರೆ ಭಾಷೆಯ ಮಾತುಗಳು ಬಂದಾಗ ಕನ್ನಡದಲ್ಲಿ ಸಬ್‌ಟೈಟಲ್ ಕೊಡಬೇಕು ಎಂಬ ವಿವೇಚನೆ ಇಲ್ಲದಿರುವುದು ನಿರ್ದೇಶಕರ ಮನಸ್ಥಿತಿಯನ್ನು, ಕನ್ನಡದ ಕುರಿತಾದ ಉಪೇಕ್ಷೆಯನ್ನಲ್ಲದೇ ಇನ್ನೇನೂ ಸೂಚಿಸುವುದಿಲ್ಲ.

ಹಾಗೆ ನೋಡಿದರೆ ವಿಡಂಬನೆಯ ಮುಖವಾಡ ಹೊತ್ತಿರುವ ಈ ಸಿನಿಮಾ ನಿಜವಾಗಲೂ ಮಾಡುತ್ತಿರುವುದು ಕನ್ನಡ ಭಾಷೆಯ ಅಪಹಾಸ್ಯ. ಅದನ್ನೇ ಈ ಸಿನಿಮಾದ ಯಶಸ್ಸು ಎಂದು ಹೇಳಬೇಕಷ್ಟೆ. ಅದೂ ವ್ಯಂಗ್ಯದಿಂದಲ್ಲ; ವಿಷಾದದಿಂದ!



# ಶಿವಣ್ಣ, ಗುರುದತ್ ಕಾಂಬಿನೇಷನ್!

ಅರವತ್ತು ವಿಶ್ರಾಂತಿಯ ವಯಸ್ಸು. ಎಂಥ ಉತ್ಸಾಹಿಗಳೂ ತುಸು ನಿಧಾನಗೊಳ್ಳುವ ವಯಸ್ಸು. ಆದರೆ ನಟ ಶಿವರಾಜ್‌ಕುಮಾರ್ ಅವರಿಗಿದು ವೇಗವರ್ಧನೆಯ ಆ್ಯಕ್ಸಲರೇಟರ್ ಆಗಿರುವಂತೆ ಕಾಣಿಸುತ್ತದೆ. ಇನ್ನೇನು ಅರವತ್ತರ ಗಡಿ ಮುಟ್ಟುತ್ತಿರುವ ಶಿವಣ್ಣನ ಬೇಡಿಕೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಬಹುಶಃ ಕನ್ನಡದ ಯಾವ ನಟನ ಬಳಿಯೂ ಇರದಷ್ಟು ಸಿನಿಮಾಗಳು ಅವರ ಬಳಿ ಇವೆ. ಕೆಲಸ ನಡೆಯುತ್ತಿರುವ, ಸಹಿ ಹಾಕಿರುವ, ಚರ್ಚೆಯಲ್ಲಿ ಇರುವ ಸಿನಿಮಾಗಳನ್ನೆಲ್ಲ ತೆಗೆದುಕೊಂಡರೆ ಎಣಿಸಲು ಎರಡೂ ಕೈ ಬೆರಳು ಸಾಲುವುದಿಲ್ಲ. ಹಾಗೆಂದು ಅವರ ಮನೆಗೆ ಬಂದು ಹೊಸ ಸಿನಿಮಾ ಘೋಷಿಸಿ ಹೋಗುವವರ ಸಾಲಂತೂ ಇಳಿಮುಖವಾಗಿಲ್ಲ.

ಇತ್ತೀಚೆಗೆ ಶಿವಣ್ಣ ಮತ್ತೊಂದು ಸಿನಿಮಾ ಘೋಷಿಸಿದ್ದಾರೆ. ಸಂದೇಶ್ ನಾಗರಾಜ್ ನಿರ್ಮಿಸುತ್ತಿರುವ ಈ ಸಿನಿಮಾವನ್ನು ಬಿ. ಗುರುದತ್ ನಿರ್ದೇಶಿಸುತ್ತಿರುವುದು ವಿಶೇಷ. ಚಿತ್ರದ ಟೈಟಲ್, ಉಳಿದ ಪಾತ್ರವರ್ಗ, ತಂತ್ರಜ್ಞರ ತಂಡ ಹೀಗೆ ಯಾವ ಮಾಹಿತಿಯೂ ಜಾಹೀರಾಗಿಲ್ಲ. ಆದರೆ ಶಿವಣ್ಣನ ಆಪ್ತಬಳಗದಲ್ಲಿರುವ ಗುರುದತ್ ಅವರು ಹೊಸ ರೀತಿಯ ಕಥಾಹಂದರವನ್ನು ಇಟ್ಟುಕೊಂಡು ಸಿನಿಮಾ ಮಾಡುತ್ತಿದ್ದಾರೆ ಎಂಬುದನ್ನಷ್ಟೇ ನಿರ್ಮಾಪಕ ಸಂದೇಶ್ ನಾಗರಾಜ್ ಬಹಿರಂಗಪಡಿಸಿದ್ದಾರೆ. ಜೊತೆಗೆ ಶಿವಣ್ಣ, ಗುರುದತ್ ಜೊತೆಗೆ ಇರುವ ಚಿತ್ರವನ್ನೂ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಇತ್ತೀಚೆಗಷ್ಟೇ ಶಿವಣ್ಣ, ಆರ್. ಜೈ ಅವರ ನಿರ್ದೇಶನದ ಇನ್ನೊಂದು ಸಿನಿಮಾಕ್ಕೂ ಸಹಿ ಹಾಕಿದ್ದಾರೆ. ಈ ನಡುವೆ 'ಜೇಮ್ಸ್' ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಧ್ವನಿ ನೀಡುವ ಕೆಲಸವನ್ನೂ ಶಿವಣ್ಣ ಮಾಡಿದ್ದಾರೆ. ಅವರು ನಟಿಸಿದ 'ಭೈರಾಗಿ' ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. 'ನೀ ಸಿಗುವವರೆಗೂ' ಒಂದು ಹಂತದ ಚಿತ್ರೀಕರಣ ಮುಗಿಸಿ ಎರಡನೇ ಹಂತಕ್ಕೆ ತಯಾರಿ ನಡೆಸುತ್ತಿದೆ. ರಿಷಭ್ ಶೆಟ್ಟಿ ನಿರ್ದೇಶನದ ಸಿನಿಮಾ, ಲೋಹಿತ್ ಅವರ ಜೊತೆಗೆ 'ಸತ್ಯಮಂಗಳ' ಸಿನಿಮಾವನ್ನೂ ಅವರು ಮುಗಿಸಬೇಕಿದೆ. ಸದ್ಯಕ್ಕೆ ಅವರು 'ವೇದ' ಸಿನಿಮಾ ಕೆಲಸದಲ್ಲಿ ಬ್ಯುಸಿ ಆಗಿದ್ದಾರೆ.

